732 (721) ಶ್ರೀ ನರೇಂದ್ರಬಾಬು ನೆ ಲ (ರಾಜಾಜಿನಗರ) ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನ್ನು ಯಾವ ವರ್ಷದಲ್ಲಿ ಅನುಷ್ಠಾನಗೊಳಿಸಲಾಯಿತು ,

(ಆ) ಇದುವರೆವಿಗೂ ಈ ಯೋಜನೆಯಡಿ ವಿನಿಯೋಗಿಸಿರುವ ಒಟ್ಟು ಅನುದಾನ ಎಷ್ಟು ,

(ಇ) ಈ ಯೋಜನೆಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

(ಈ) ಕೇಂದ್ರ ಸರ್ಕಾರದ ಆದೇಶದಂತೆ, ಈ ಯೋಜನೆಯ ಕಾರ್ಯಕ್ರಮಗಳನ್ನು ತ್ವರಿತವಾಗಿ ಜಾರಿಗೆ ತರುವ ನಿಟ್ಟಿನಲ್ಲಿ ರಾಜ್ಯದ ಬೇರೆ ಆಡಳಿತಾತ್ಮಕ ಕಛೇರಿ (separate cell) ಪ್ರಾರಂಭಿಸುವ ಆಲೋಚನೆ ಸರ್ಕಾರದ ಮುಂದಿದೆಯೇ ,

(ಉ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಇದುವರೆಗೆ ಬಿಡುಗಡೆಯಾಗಿರುವ ಹಣ ಎಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು) ,

(ಊ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ,

(ಋ) ಹಾಗಿದ್ದಲ್ಲಿ, ಈ ಆರ್ಥಿಕ ವರ್ಷದಲ್ಲಿಯೇ ಪ್ರಾರಂಭಿಸಲಾಗುವುದೇ ?

ಶ್ರೀ ಶಶಿಕಾಂತ ಅ ನಾಯಕ (ತೋಟಗಾರಿಕೆ ಸಚಿವರು) –

(ಅ) ರಾಜ್ಯದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು 2005–06ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ

(ಆ) ಇದುವರೆವಿಗೂ ಈ ಯೋಜನೆಯಡಿಯಲ್ಲಿ ರೂ 71 51 ಕೋಟಿ ರೂ ಗಳು ವಿನಿಯೋಗವಾಗಿರುತ್ತದೆ

(ಇ) ಅನುಷ್ಠಾನದಲ್ಲಿ ವಿಳಂಬವಾಗಿರುವುದಿಲ್ಲ

(ಈ) ಹೌದು, ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜೆನ್ಸಿಯು ತೋಟಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ

(ಉ) ಈ ವರೆವಿಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಒಟ್ಟು 133 95 ಕೋಟಿ ರೂ ಗಳ ಅನುದಾನ ಬಿಡುಗಡೆಯಾಗಿರುತ್ತದೆ ಜಿಲ್ಲಾವಾರು ಬಿಡುಗಡೆಯಾಗಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

(ಊ) ಈ ಯೋಜನೆಯ ಅನುಷ್ಠಾನವು 2005–06ನೇ ಸಾಲಿನಿಂದ ಪ್ರಾರಂಭವಾಗಿದ್ದು, ಅನುಷ್ಠಾನಗೊಳ್ಳುತ್ತಿದೆ

(ಋ) ಉದ್ಭವಿಸುವುದಿಲ್ಲ

ಅನುಬಂಧ

2005-06 ಮತ್ತು 2006-07ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರ

ಕ್ರ ಸಂ	ಜಿಲ್ಲೆಗಳು	2005-06 (ರೂ ಲಕ್ಷಗಳಲ್ಲಿ)	2006-07 (ರೂ ಲಕ್ಷಗಳಲ್ಲಿ)	ಒಟ್ಟು ಮೊತ್ತ (ರೂ ಲಕ್ಷಗಳಲ್ಲಿ)
1	ಬೆಂಗಳೂರು ಗ್ರಾಮಾಂತರ	336 45	473 38	809 83
2	ತುಮಕೂರು	232 88	306 75	539 63
3	ಕೋಲಾರ	231 94	304 79	536 73
4	ಮೈಸೂರು	196 33	174 02	370 35
5	ಕೊಡಗು	148 62	554 73	703 35
6	ಹಾಸನ	197 20	546 34	743 54
7	ದಕ್ಷಿಣ ಕನ್ನಡ	362 33	222 16	584 49
8	ಉಡುಪಿ	123 71	112 98	236 69
9	ಉತ್ತರ ಕನ್ನಡ	214 73	246 97	461 70
10	ಚಿತ್ರದುರ್ಗ	157 02	553 60	710 62
11	ಕೊಪ್ಪಳ	184 63	185 50	370 13
12	ಬೆಳಗಾವಿ	327 01	533 62	860 63
13	ಬಾಗಲಕೋಟೆ	89 31	154 02	243 33
14	ಬಿಜಾಪುರ	204 27	340 40	544 67
15	ಗುಲ್ಬರ್ಗ	105 58	170 13	275 71
16	ಚಿಕ್ಕಮಗಳೂರು	40 43	600 10	640 53
17	ಶಿವಮೊಗ್ಗ	66 66	691 96	758 62
18	ಬೆಂಗಳೂರು ನಗರ	32 05	117 78	149 83
19	ಮಂಡ್ಯ	55 71	40 18	95 89
20	ಚಾಮರಾಜನಗರ	38 38	28 16	66 54
21	ದಾವಣಗೆರೆ	36 38	33 22	69 60
22	ಹಾವೇರಿ	35 00	18 38	53 38
23	ಬಳ್ಳಾರಿ	45 19	61 70	106 89
24	ಧಾರವಾಡ	58 13	99 90	158 03
25	ಗದಗ	34 00	25 94	59 94
26	ರಾಯಚೂರು	39 10	41 64	80 74
27	ಬೀದರ್	35 26	47 94	83 20
28	ತೋಉನಿ, ಹುಳಿಮಾವು	143 65	204 16	347 81
29	ನಿರ್ದೇಶನಾಲಯದಿಂದ ಉಳಿಸಿಕೊಂಡಿರುವುದು	683 17	2049 55	2732 72
	ಒಟ್ಟು	**4455 12**	**8940 00**	**13395 12**